ಮೈಸೂರು ವಿಧಾನ ಸಭೆ

MYSORE LEGISLATIVE ASSEMBLY

Monday, 24th July 1972/Shravana 2, 1894 S.E.

The House met in the Assembly Chamber, Vidhana Soudha, at One of the Clock.

MADAM SPEAKER (SMT. K. S. NAGARATHNAMMA) in the Chair.

(STARRED QUESTIONS TO WHICH ORAL ANSWERS WERE GIVEN)

MADAM SPEAKER:—Question numbers 105 and 603 may be taken up together.

ABOLITION OF OCTROI TAX

105. SRI T. R. SHAMANNA (Fort).—

Will the Minister for Municipal Administration be pleased to state :—

(*a*) Whether the Government intend to abolish Octroi ;

(*b*) if so, how the local bodies will be compensated equitably to make up the loss of revenue that was being realised for Octroi ?

SRI B. BASAVALINGAPPA (Minister for Municipal Administration):—

(*a*) No.

(*b*) Does not arise.

ABOLITION OF OCTROI TAX

603. SRI D. B. KALMANKAR (Afzalpur) .—

Will the Minister for Municipal Administration be pleased to state :—

(*a*) Whether the Government has received representations from the public to abolish octroi ;

(*b*) Whether the Government has decided to abolish it from the current year ;

(SRI D. B. KALMANKAR)

(c) the total loss of revenue due to abolition of Octroi and how the Government proposes to make good the loss ?

SRI B. BASAVALINGAPPA (Minister for Municipal Administration):—

(a) Yes.

(b) No.

(c) Does not arise.

SRI D. B. KALMANKAR :—May I know whether it is a fact that the Bhoothalingam Committee has recommended abolition of Octroi ?

† SRI B. BASAVALINGAPPA :—I am not aware of it. As far as I remember, the Keskar Committee has recommended abolition of octroi.

SRI D. B. KALMANKAR :—In view of the fact that the administration of Octroi is filled with corruption and the middlemen's pockets are swelling and the Municipalities are not making any profit, will Government consider the abolition of octroi immediately as recommended in the Report of Bhoothalingam Committee that it should be abolished ?

SRI B. BASAVALINGAPPA :—It is not correct to say that the levy of Octroi has led to large-scale corruption in the administration of Municipalities. We have been, of course, receiving representations from merchants but not from people. I do not agree with my hon. friend when he says that it has led to corruption.

ಶ್ರೀ ಎಂ. ಎಸ್. ಕೃಷ್ಣನ್ :—ಆಕ್ಟ್ರಾಯ ಪದ್ಧತಿ ಒಂದು ಓಬಿರಾಯನ ಕಾಲದ ಪದ್ಧತಿ. ಇದು ಹೋಗಬೇಕೆಂದು ಹಿಂದೆ ಇದ್ದ ಮಾನ್ಯ ಮಂತ್ರಿಗಳೂ ಹೇಳಿದ್ದರು. ಮತ್ತು ಇದನ್ನು ತೆಗೆಯಬಹುದು ಎಂದು ಇಲ್ಲಿ ಒಪ್ಪಿದ್ದರು. ಇದು ಸರಕಾರದ ಗಮನಕ್ಕೆ ಬಂದಿದೆಯೇ ? ಬಂದಿದ್ದರೆ ಈಗಲಾದರೂ ಇದನ್ನು ಮತ್ತೆ ಪರಿಶೀಲನೆ ಮಾಡಲು ತಯಾರಾಗಿದ್ದಾರೆಯೇ ?

SRI B. BASAVALINGAPPA :—It is true that during the Budget discussion in April 1970, the then Finance Minister made a mention of the abolition of Octroi. But taking all facts into consideration, the Government is not in favour of abolishing it

ಶ್ರೀ ಟಿ. ಆರ್. ಶಾಮಣ್ಣ :—ಆಕ್ಟ್ರಾಯನ್ನು ತೆಗೆಯಬೇಕೆಂದು ಅನೇಕ ಕಡೆಯಿಂದ ಸರಕಾರಕ್ಕೆ ಒತ್ತಾಯವಾದ ಮನವಿಗಳು ಬರುತ್ತಿವೆ ಎಂದು ಕೇಳುತ್ತೇವೆ. ಆ ರೀತಿ ಸರಕಾರದ ಗಮನಕ್ಕೆ ಬಂದಿವೆಯೇ ? ಹಾಗಿದ್ದರೆ ಇದನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ :—ನಾನು ಇಲ್ಲಿ ಆಗಲೇ ಇದರ ಬಗ್ಗೆ ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದೇನೆ. ಆಕ್ಟ್ರಾಯನ್ನು ತೆಗೆಯತಕ್ಕ ಪ್ರಶ್ನೆ ಈಗ ಮತ್ತೆ ಉದ್ಭವಿಸುವುದಿಲ್ಲ.

---

†Astevicks indicate that remarks or speeches have not been revised by the member concened.

SRI B. B. SAYANAK :—When Tamil Nadu, Bengal and Andhra Governments have abolished this octroi tax, why not this Government also consider the abolition of this octroi ?

SRI B. BASAVALINGAPPA :—I have made this point very clear that we are not going to abolish Octroi in view of the fact that we want some income for the Municipalities to maintain themselves. For the Municipalities, the main income is from Octroi.

ಶ್ರೀ ಕೆ. ಎಂ. ನಾಗಣ್ಣ :—ಬೆಂಗಳೂರು ನಗರದ ಕಾರ್ಪೊರೇಷನ್‌ನಲ್ಲಿ ಆಕ್ಟ್ರಾಯಿ ಇರುವುದರಿಂದಾಗಿ ಲಂಚ ರುಷುವತ್ತುಗಳು ಹೆಚ್ಚಾಗುತ್ತಾ ಇವೆ. ಇದೂ ಅಲ್ಲದೆ ವರ್ತಕರು ಈಗ ಅವರ ಗೊಡೌನ್‌ಗಳನ್ನೂ ಟೋಲ್‌ಗೇಟಿನಿಂದಾಚೆಗೆ ಇಟ್ಟುಕೊಂಡಿರುವುದರಿಂದ ಕಾರ್ಪೊರೇಷನ್‌ಗೆ ಬರುವ ವರಮಾನವೂ ಕಡಿಮೆ ಯಾಗುತ್ತಿದೆ. ಆದಕ್ಕಾಗಿ ಈ ಆಕ್ಟ್ರಾಯಿ ಹಾಕುವುದನ್ನು ತೆಗೆದು ಇದಕ್ಕೆ ಬದಲಾಗಿ ಸೇಲ್ಸ್‌ಟ್ಯಾಕ್ಸ್ ಮೇಲೆ ಸರ್‌ಚಾರ್ಜು ಎಂದು ಹಾಕಿದರೆ ಈಗ ಆಕ್ಟ್ರಾಯಿನಿಂದ ಬರುವ ವರಮಾನಕ್ಕಿಂತ ಹೆಚ್ಚಾಗಿ ವರಮಾನ ಬರುವ ಸಂಭವ ಇದೆ. ಇದು ಸರಕಾರದ ಗಮನಕ್ಕೆ ಬಂದಿದೆಯೇ ? ಬಂದಿದ್ದರೆ ಇದರ ಬಗ್ಗೆ ಏನು ಕಾರ್ಯ ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಬಿ. ಬಸವಲಿಂಗಪ್ಪ :—ಆಕ್ಟ್ರಾಯಿ ವಸೂಲಿಯಿಂದ ಲಂಚ ರುಷುವತ್ತುಗಳು ಇವೆ, ಬೇರೆ ತೆರಿಗೆ ಹಾಕಿದರೆ ಹೆಚ್ಚು ಆದಾಯ ಬರುತ್ತದೆ ಎಂದು ಆಕ್ಟ್ರಾಯನ್ನು ತೆಗೆಯಲು ಬರುವುದಿಲ್ಲ. ಬೆಂಗಳೂರು ನಗರದ ಕಾರ್ಪೊರೇಷನ್‌ಗೆ ಸುಮಾರು ಎರಡು ಕೋಟಿ ರೂಪಾಯಿಯಷ್ಟು ವರಮಾನ ಆಕ್ಟ್ರಾಯ ಒಂದ ರಿಂದಲೇ ಬರುತ್ತಿದೆ. ಇದನ್ನು ತೆಗೆದು ಬೇರೆ ವಿಧವಾಗಿ ಸೇಲ್ಸ್‌ಟ್ಯಾಕ್ಸ್ ಹಾಗೂ ಸರ್‌ಚಾರ್ಜುಗಳು ಎಂದು ಮತ್ತೆ ಹಾಕಲು ಸರಕಾರ ಏನೂ ಯೋಚನೆ ಮಾಡಿಲ್ಲ ಮತ್ತು ಆಕ್ಟ್ರಾಯನ್ನು ತೆಗೆಯಲಿಕ್ಕೆ ಸಾಧ್ಯವಿಲ್ಲ.

SRI D. B. KALMANKAR :—The Hon'ble Minister has admitted that representations for the abolition of octroi have been received from the public. May I know what is the nature of the representations that have been made and what suggestions are contained in them to make good the loss that will be incurred by the abolition of octroi ?

ಶ್ರೀ ಬಿ. ಬಸವಲಿಂಗಪ್ಪ :—ಲಾರಿಯಲ್ಲಿ ತರುವ ಸಾಮಾನುಗಳನ್ನು ಮಂಧ್ಯ ದಾರಿಯಲ್ಲಿ ತನಿಖೆಗೆ ಹಿಡಿಯುವುದರಿಂದ ವಿಳಂಬವಾಗುತ್ತಿದೆ. ಇದನ್ನು ತಪ್ಪಿಸಬೇಕೆಂದು ಸಾರ್ವಜನಿಕರಿಂದ ಮನವಿಗಳು ಬರು ತ್ತಿವೆ. ಆದರೆ ಸರಕಾರಕ್ಕೆ ಸಾರ್ವಜನಿಕರು ಆಕ್ಟ್ರಾಯನ್ನು ತೆಗೆಯಬೇಕೆಂದು ಯಾವ ಮನವಿಗಳನ್ನೂ ಕಳುಹಿಸಿಲ್ಲ.

ಶ್ರೀ ಪಿ. ಎಂ. ಬಂಗಿ.— ಬಿಜಾಪುರ ಜಿಲ್ಲೆಯ ಜಮಖಂಡಿ, ಬೀಳಗಿ, ಮಂಧೋಳ ಮುಂತಾದ ಕಡೆ ಗಳಲ್ಲಿ ಮುನಿಸಿಪಾಲಿಟಿಗಳಿಗೆ ಬರುವ ಆಕ್ಟ್ರಾಯನ್ನು ತಪ್ಪಿಸಿ, ಆ ಹಣವನ್ನು ವರ್ತಕರು ಮತ್ತು ಮುನಿಸಿಪಾಲಿಟಿಯ ಸದಸ್ಯರು ಷೇರ್ ಮಾಡಿಕೊಳ್ಳುವುದಕ್ಕೆ ಹತ್ತಿದ್ದಾರೆ, ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಬಸವಲಿಂಗಪ್ಪ. — ಬಂದಿಲ್ಲ.

ಶ್ರೀ ಟಿ. ಆರ್. ಶಾಮಣ್ಣ. —ವರ್ತಕರು ಆಕ್ಟ್ರಾಯ್ ಬಗ್ಗೆ ಕಿರುಕುಳವಾಗುತ್ತಿದೆ ಎಂದು ಹೇಳುತ್ತಿ ದ್ದಾರೆ. ಅದನ್ನು ತಪ್ಪಿಸುವುದಕ್ಕೆ ಏನು ಪ್ರಯತ್ನ ಮಾಡಿದ್ದೀರಾ ?

ಶ್ರೀ ಬಿ. ಬಸವಲಿಂಗಪ್ಪ.— ವರ್ತಕರಿಂದ ಏನಾದರೂ ಸಲಹೆ ಬಂದರೆ ಅದನ್ನು ಪರಿಶೀಲನೆ ಮಾಡಿ, ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.